(ಇಂದು ದಿನಾಂಕಃ 30-12-2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು)

**<u>ಪಾಟೀ ಸವಾಲು ಶ್ರೀ ವಿ.ಎನ್.ಎಮ್ ಎದುರುದಾರ ಪರ ವಕೀಲರಿಂದಃ</u>**

1. ಅಪಘಾತ ಆಗಿ 4 ವರ್ಷ ಆಗಿದೆ. ಅಪಘಾತವು ಗುಡಿ ತಾಂಡಾದ ಹತ್ತಿರ ಆಗಿದೆ. ಆ ದಿನ ನಾನು ಹೊಲಕ್ಕೆ ಹೋಗಿದ್ದೆ. ನಾನು ಒಬ್ಬನೆ ಹೋಗಿದ್ದೆ. ನಾನು ನನ್ನ ಟಿವಿಯಸ ಗಾಡಿಯ ಮೇಲೆ ಹೋಗಿದ್ದೆ ಅದು ನನ್ನ ಗಾಡಿ ಇತ್ತು. ನನಗೆ ವಾಹನದ ಸಂಖ್ಯೆ ಗೊತ್ತಿಲ್ಲ. ನನ್ನ ವಾಹನದ ಆರ ಸಿ, ಇನಷ್ಯೂರೆನ್ಸ ಮತ್ತು ಲೈಸೆನ್ಸ ನನ್ನ ಹತ್ತಿರ ಇಲ್ಲ ಅದಕ್ಕೆ ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನ್ನ ಹತ್ತಿರ ಚಾಲನಾ ಪರವಾನಿಗೆ ಇರುವುದಿಲ್ಲ. ಅಪಘಾತವಾದಾಗ ನಾನು ಹೋಲದಿಂದ ಮನೆಗೆ ಹೋಗುತ್ತಿದ್ದೆ. ಆ ವಾಹನ ನನ್ನ ಎದುರುನಿಂದ ಬಂದಿರುತ್ತದೆ. ಅಪಘಾತ ಆದಾಗ ನನನ್ನಜೊತೆ ಬೇರೆ ಯಾರು ಇರಲಿಲ್ಲ. ಅಪಘಾತ ಪಡಿಸಿದ ವಾಹನ ಸ್ಥಳದಲ್ಲಿಯೆ ಇತ್ತು. ನನ್ನ ವಾಹನ ಕೂಡ ಸ್ಥಳದಲ್ಲಿಯೆ ಇತ್ತು. ಅಪಘಾತ ಪಡಿಸಿದ ವ್ಯಕ್ತಿ ನಮ್ಮ ತಾಂಡಾದವನು ಎಂದರೆ ಸರಿ. ಅಪಘಾತವು ಕಾರಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರಿಯಾದಿದಾರನು ನನ್ನ ದೊಡ್ಡಪ್ಪನ ಮಗ ಇರುತ್ತಾನೆ. ಅಪಘಾತ ಆದ ನಂತರ ನಾನು ಬೀದರಿನ ಗುದಗೆ ಆಸ್ಪತ್ರೆಗೆ ಹೋದೆನು. ಫಿರಿಯಾದಿದಾರನು ಅಪಘಾತವನ್ನು ನೋಡಿಲ್ಲ. ಬೀದರ ಆಸ್ಪತ್ರೆಗೆ ನನ್ನ ಅಣ್ಣ ಕರೆದುಕೊಂಡು ಹೋಗಿದ್ದರು. ನನಗೆ 2 ದಿನ ಪ್ರಜ್ಞೆ ಇರಲಿಲ್ಲ. ಫಿರಿಯಾದಿದಾರನು ದೂರು ಕೊಡುವಾಗ ನಾನು ಅವರಿಗೆ ಇಂತಹ ವಾಹನವು ಬಂದು ನನಗೆ ಅಪಘಾತ ಪಡಿಸಿದೆ ಎಂದು ಹೇಳಿದ್ದೇನಾ ಎಂದರೆ ಸಾಕ್ಷಿ ನಾನು ಅವನಿಗೆ ಹೇಳಿಲ್ಲ ಎಂದು ಹೇಳುತ್ತಾರೆ. ಅಪಘಾತವು ಬಳಿಗ್ಗೆ 10:30 ಗಂಟೆಗೆ ಆಗಿತ್ತು. ಅಪಘಾತ ಆದಾಗ ನಾನು ಮೊದಲು ಬೀದರ ಆಸ್ಪತ್ರೆಗೆ ಹೋಗಿದ್ದೆ, ಬೇರೆ ಎಲ್ಲಿಯೂ ಹೋಗಿರಲಿಲ್ಲ. ಪೋಲಿಸರು ಆಸ್ಪತ್ರೆಗೆ

ಬಂದು ದೂರನ್ನು ಬರೆದುಕೊಂಡು ಹೋಗಿರುತ್ತಾರೆ. ನನಗೆ ಕನ್ನಡ ಓದಲು ಬರುವುದಿಲ್ಲ. ಓದಿ ಹೇಳಿದರೆ ತಿಳಿಯುತ್ತದೆ. ನಿ.ಪಿ-2 ರ ಪ್ರಕಾರ ಫಿಯಾದಿದಾರನು ಪೋಲಿ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತಾರೆ ಎಂದು ಬರೆದಿದೆ ಎಂದರೆ ಸಾಕ್ಷಿ ನನ್ನ ಅಣ್ಣ ಹೋಗಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಿ.ಪಿ-2 ರಲ್ಲಿ ನನ್ನ ಸಹಿ ಇರುವುದಿಲ್ಲ. ಪೋಲಿಸರು ನನ್ನ ಸಹಿ ಪಡೆದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಾನು ಆಸ್ಪತ್ರೆಗೆ ಹೋಗಿ ದಾಖಲಾದ ನಂತರ ಯಾವುದೇ ಎಮ ಎಲ್ ಸಿ ಮಾಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಅಣ್ಣ ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ದಿಃ 21-12-2020 ರಂದು ನಾನು ಗುದಗೆ ಆಸ್ಪತ್ರೆಗೆ ಹೋಗಿದ್ದು ನನ್ನ ಜೊತೆ ನನ್ನ ಅಣ್ಣ ಶಾಮರಾವ ಮತ್ತು ಓಂನಾಥ ಬಂದಿದ್ದರು. ನನನ್ನು ಆಸ್ಪತ್ರೆಗೆ ಅವರೆ ಸೇರಿಸಿರುತ್ತಾರೆ. ನನಗೆ ಗಾಯಗಳು ಕಾರಿನಿಂದ ಆಗಿವೆ ಎಂದು ಆಸ್ಪತ್ರೆಯಲ್ಲಿ ಬರೆಸಿರುತ್ತಾರೆ. ನಾನು ಸಲ್ಲಿಸಿದ ನಿ.ಪಿ-9 ರಲ್ಲಿ ನಾನೇ ಗಾಡಿಯಿಂದ ಬಿದ್ದು ಗಾಯ ಮಾಡಿಕೊಂಡಿರುತ್ತೇನೆ ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಕಾರು ಗುದ್ದಿರುತ್ತದೆ ಎಂದು ಹೇಳುತ್ತಾರೆ. ನಿ.ಪಿ-9 ರಲ್ಲಿ ಆಸ್ಪತ್ರೆಯಲ್ಲಿ ಬರೆದದ್ದು ಸರಿ ಇರುತ್ತದೆ. ನಿ.ಪಿ-5 ರಲ್ಲಿ ಅಪಘಾತದಿಂದ ನನಗೆ ಗಾಯ ಆಗಿದೆ ಎಂದು ಬರೆದಿಲ್ಲ ಎಂದರೆ ಸರಿ. ನಾನು, ನನ್ನ ಅಣ್ಣ ಮತ್ತು ಕಾರಿನ ಮಾಲಿಕ ಒಂದೇ ಊರಿನವರು ಎಂದರೆ ಸರಿ. ನನ್ನ ಊರು ಗೋವಿಂದ ತಾಂಡ ಇರುತ್ತದೆ. ಅಂತಿಮವರದಿಯಲ್ಲಿ ತೋರಿಸಿದ ಸಾಕ್ಷಿದಾರರು ಎಲ್ಲರು ಗೋವಿಂದ ತಾಂಡದವರು ಇರುತ್ತಾರೆ ಎಂದರೆ ಸರಿ. ನಾನೇ ಗಾಡಿಯಿಂದ ಬಿದ್ದು ಗಾಯ ಮಾಡಿಕೊಂಡಿಕೊಂಡಿದ್ದು ಸುಳ್ಳು ಪರಿಹಾರ ಪಡೆಯುವ ಉದ್ದೇಶದಿಂದ ನಾನು ಹಾಗೂ ನನ್ನ ಅಣ್ಣ ಸೇರಿ ಕಾರ ವಾಹನ ಸಂಖ್ಯೆ ಎಮ ಎಚ 12 ಕೆಟಿ 3667 ವಾಹನದ ಮೇಲೆ ಸುಳ್ಳು ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

2. ನಾನು ಗುದಗೆ ಆಸ್ಪತ್ರೆಯಲ್ಲಿ 5 ದಿನ ಇದ್ದೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ರೂ.3,00,000/- ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಾನು ದಿಃ30-12-2020 ರಿಂದ ದಿಃ03-01-2021 ರವರೆಗೆ ಆಸ್ಪತ್ರೆಯಲ್ಲಿ ಇದೆ ಎಂದು ಬರೆದಿದೆ ಎಂದರೆ ಸಾಕ್ಷಿ ನಾನು ಎರಡು ಸಲ ಆಸ್ಪತ್ರಗೆ ಹೋಗಿದ್ದೆ ಎಂದು ಹೇಳುತ್ತಾರೆ. ನಾನು ಮನ್ನಾ ಎ ಖೇಳಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ. ನಾನು ಜಹಿರಾಬಾದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯ ಹೆಸರು ನನಗೆ ಗೊತ್ತಿಲ್ಲ. ಈಗ ಒಂದು ವರ್ಷದ ಹಿಂದೆ ಹೋಗಿದ್ದೆ, ಕಾಲಿನಲ್ಲಿ ನೋವು ಇದ್ದುದ್ದರಿಂದ ತೋರಿಸಲು ಹೋಗಿದ್ದೆ. ನಾನು ಶ್ರೀ ಸಾಯಿ ಆಸ್ಪತ್ರೆ ಜಹಿರಾಬಾದಿನಲ್ಲಿ ರಾಡಗಳನ್ನು ತೆಗೆಯಲು ಎರಡು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಿ.ಪಿ-11 ಮತ್ತು 12 ರ ಪ್ರಕಾರ ನಾನು ಸಂಪೂರ್ಣ ಗುಣವಾದ ನಂತರ ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆ ಎಂದು ಬರೆದಿದೆ ಎಂದರೆ ಸಾಕ್ಷಿ ಯಾವುದೇ ಉತ್ತರ ಕೊಡುವುದಿಲ್ಲ. ನಿ.ಪಿ-13 ರ ಪ್ರಕಾರ ನನ್ನ ಮೂಳೆಗಳು ಕೂಡಿಕೊಂಡಿವೆ ಎಂದು ಬರೆದಿದೆ ಎಂದರೆ ಸರಿ. ನನ್ನ ಮುಂದಿನ ಚಿಕಿತ್ಸೆಗಾಗಿ ರೂ. 1,00,000/- ಅವಶ್ಯಕತೆ ಇದೆ ಎಂದು ತೋರಿಸಲು ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಯಾವುದೇ ಉತ್ತರ ಕೊಡುವುದಿಲ್ಲ. ಬಿಲ್ ಕ್ರಮ ಸಂಖ್ಯೆ 18 ಡುಬ್ಲಿಕೇಟ ಎಂದು ಬರೆದಿದೆ ಎಂದರೆ ಸರಿಯಲ್ಲ. ಬಿಲ್ಲುಗಳು ರೀಸಿಪ್ಟ ಆಗಿದ್ದು ಮೂಲ ಬಿಲ್ಲುಗಳು ಇಲ್ಲ ಎಂದರೆ ಸರಿ. ಬಿಲ್ ಕ್ರಮ ಸಂಖ್ಯೆ 43 ಬಗ್ಗೆ ರಸೀದಿಗಳು ಇಲ್ಲ ಎಂದರೆ ಸರಿ. ನನಗೆ ಕಾರಿನಿಂದ ಯಾವುದೇ ಅಪಘಾತ ಆಗಿಲ್ಲ ಆದರು ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈಗ 37 ವರ್ಷ ಇರುತ್ತದೆ. ಅಪಘಾತ ಆದಾಗ ನನಗೆ 34 ವರ್ಷ ಆಗಿತ್ತು. ನನ್ನ ಆಧಾರ ಕಾರ್ಡನ ಪ್ರಕಾರ ನನ್ನ ಜನ್ಮ ದಿಃ01-01-1981 ಇರುತ್ತದೆ ಎಂದರೆ ಸರಿ. ಸಾಕ್ಷಿ

ಆಧಾರ ಕಾರ್ಡನ್ನು ನೋಡಿ ಗುರುತಿಸಿದ್ದು ನಿ.ಆರ -1 ಎಂದು ಗುರುತಿಸಲಾಯಿತು. ನಿ.ಆರ -1 ರ ಪ್ರಕಾರ ಅಪಘಾತದ ಸಮಯದಲ್ಲಿ ನನ್ನ ವಯಸ್ಸು 39 ಆಗಿತ್ತು ಎಂದರೆ ಸರಿ. ನಾನು ಅಪಘಾತದ ಸಮಯದಲ್ಲಿ ಟೈಲ್ಸ ಕೆಲಸ ಮಾಡುತ್ತಿದ್ದೆ. ನಾನು ಮುಂಬೈಯಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಸಲ್ಲಿಸಿಲ್ಲ. ನಾನು ಗೌಂಡಿ ಕೆಲಸ ಮಾಡಿ ತಿಂಗಳಿಗೆ 20 ಸಾವಿರ ಗಳಿಸುತ್ತಿದ್ದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರದ ಹಣ ಪಡೆಯಲು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ನಿಂತುಕೊಂಡು ಅರ್ಧ ಗಂಟೆ ಆಗಿದೆ ಎಂದರೆ ಸಾಕ್ಷಿ ಇನ್ನು ಅರ್ದ ಗಂಟೆ ಆಗಿಲ್ಲ ನನಗೆ ನೋವು ಆಗುತ್ತಿದೆ ಎಂದು ನಾನು ನ್ಯಾಯಾಲಯಕ್ಕೆ ಹೇಳಿಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.